ಶ್ರೀ ಜಿ.ಎಲ್. ಕಬಾಡಿ :—ಈ ಪಿಡಬ್ಲ್ಯುಡಿ ಇಲಾಖೆಯವರಲ್ಲಿ ಬರೇ ಖರ್ಚು ಆಗುತ್ತಿದೆಯಲ್ಲದೆ ರಸ್ತೆಗಳು ಸರಿಯಾಗಿ ಆಗುತ್ತಾ ಇಲ್ಲ. ರಸ್ತೆಗಳಿಗೆ ಖರ್ಚು ಮಾತ್ರ ತೋರಿಸುತ್ತಾರೆಯೇ ಹೊರತು ರಸ್ತೆಗಳು ಕಾಣುವುದಿಲ್ಲ ಆದ್ದರಿಂದ ಇದನ್ನು ಪೂರ್ತಿಯಾಗಿ ವಿಚಾರಿಸಿ ಏನಾ ಕಾರಣ ಖರ್ಚು ತೋರಿಸಿ ರಸ್ತೆಗಳನ್ನು ಏಕೆ ಮಾಡಿಲ್ಲ ಎಂಬುದರ ಬಗ್ಗೆ ವಿಚಾರಣೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್ :—ಈಗ ಕೆಲವು ರಸ್ತೆಗಳಿಗೆ ದುಡ್ಡು ಖರ್ಚಾಗಿದೆ, ಕೆಲವು ರಸ್ತೆಗಳನ್ನು ಮಾಡಿದರೂ ಅವುಗಳು ಕೆಟ್ಟು ಹೋಗಿವೆ. ಹಳೆಯ ಕಾಲದ ಕತೆ ಏಕೆ? ಅದನ್ನು ಹೇಳಿದರೆ ನಿಮಗೆ ಕೋಪ ಬರುತ್ತದೆ. ಈಗ ಏನು ಆಗಬೇಕು ಹೇಳಿ, ಅದನ್ನು ಮಾಡಿಸೋಣ.

GOVERNMENT HOTELS IN THE STATE

903. SMT. DAMAYANTHI BOREGOWDA (Srirangapatna).—Will the Chief Minister be pleased to state.—

(*a*) the names of hotels in the State managed by the Government;

(*b*) the income and expenditure of such hotels for the year 1971-72;

(*c*) the income and expenditure of Mysore Bhavan, New Delhi for the year 1971-72?

SRI D. DEVARAJ URS (Chief Minister).—

(*a*) None

(*b*) Does not arise

(*c*) Income Rs. 2,22,701—23
Expenditure Rs. 3,73,992—60

SMT. DAMAYANTHI BOREGOWDA.—May I know the reasons for the loss in the Mysore Bhavan at Delhi?

SRI D. DEVARAJ URS.—The establishment charges which we incur every year are not covered by the revenues that we get.

SMT. DAMAYANTHI BOREGOWDA.—Will the Government call for tenders after the expiry of the lease periods of Metropolitan Hotel at Mysore and the KRS Hotel?

SRI D. DEVARAJ URS:—Yes.

ಶ್ರೀ ಕೋಣಂದೂರು ಲಿಂಗಪ್ಪ.—ರಾಜ್ಯ ಸರ್ಕಾರದವರು ಯಾವ ಹೋಟಲುಗಳನ್ನು ನಡೆಸುತ್ತಿಲ್ಲ ವೆಂದು ಹೇಳುತ್ತಿದ್ದೀರಿ. ಈಗ ಕೆ.ಆರ್. ಸಾಗರದ ಹೋಟೇಲನ್ನು ಕಂಟ್ರಾಕ್ಟ್ ಕೊಟ್ಟಿರುವುದು ನಿಜ. ಎರಡನೆಯದು ಡೆಲ್ಲಿಯೊಳಗೆ ಇರುವ ಮೈಸೂರು ಭವನದಲ್ಲಿ ಮೈಸೂರಿನಿಂದ ಯಾರಾದರೂ ಪ್ರಜೆಗಳು ಹೋದರೆ ಅವರಿಗೆ ೨೫—೩೦ ರೂಪಾಯಿ ಚಾರ್ಜ್ ಮಾಡುತ್ತಾರೆ. ಆದರೆ ಮೈಸೂರಿನ ಅಧಿಕಾರಿಗಳು ಯಾರಾದರೂ ಹೋದರೆ ಅವರಿಗೆ ನಾಲ್ಕೂವರೆ ರೂಪಾಯಿ ಏನೋ ಚಾರ್ಜ್ ಮಾಡುತ್ತಿದ್ದಾರೆ. ಈ ರೀತಿ ತಾರತಮ್ಯ ಏಕೆ ಇಟ್ಟಿದ್ದೀರಿ? ಅದೂ ಅಲ್ಲದೆ ಅಧಿಕಾರಿಗಳಿಗೆ ಟಿ.ಎ, ಡಿ.ಎ. ಎಲ್ಲ ಬರುವುದರಿಂದ ಅದರಿಗೆ ಹೆಚ್ಚು ರೇಟ್ ಇಟ್ಟರೂ ತೊಂದರೆಯಿಲ್ಲ ಅಥವಾ ಅವರಿಗೂ ಒಂದೇ ರೀತಿಯಲ್ಲಿ ಇಟ್ಟು ಕಡಿಮೆ ಮಾಡಿ.

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಭವನದಲ್ಲಿ ಎಲ್ಲರಿಗೂ ಒಂದೇ ರೇಟ್ ಇಟ್ಟರೆ ನಿಮ್ಮಂಥವರು ಅಥವಾ ಅಧಿಕಾರಿಗಳು ಹೋದರೆ ಅಲ್ಲಿ ಜಾಗವೇ ಇರುವುದಿಲ್ಲ. ಆದ್ದರಿಂದ ಎಲ್ಲರಿಗೂ ಒಂದೇ ರೇಟ್ ಇಡುವುದಕ್ಕೆ ಆಗುವುದಿಲ್ಲ. ಮತ್ತು ಅಧಿಕಾರಿಗಳು ಏನಾದರೂ ಸರ್ಕಾರೀ ಕೆಲಸದ ಮೇಲೆ ಹೋಗುತ್ತಾರೆ. ಆದ ಕಾರಣ ಅವರಿಗೆ ಸ್ವಲ್ಪ ಕನ್‌ಸೆಶನ್‌ನಲ್ಲಿ ಕೊಡುತ್ತಿದ್ದಾರೆ. ಇದು ಅನುಚಾನವಾಗಿ ಹಿಂದಿನಿಂದ ನಡೆದುಕೊಂಡು ಬಂದಿದೆ. ಎಲ್ಲರಿಗೂ ಒಂದೇ ರೇಟ್ ಮಾಡಬೇಕೆಂದರೆ ಅಸೆಂಬ್ಲಿಯಲ್ಲಿ ಎಲ್ಲರೂ ಬಂದು ಕೂತುಕೊಳ್ಳಿ ಎಂದು ಹೇಳಿದ ಹಾಗೆ ಆಗುತ್ತದೆ.

SRI S. M. YAHYA.—Is there any proposal to start Government Hotels in our State?

SRI D. DEVARAJ URS.—We are not so much worried in starting Hotels in the State and there is no proposal before the Government at the moment.

ಶ್ರೀ ಕೆ. ಎಂ. ನಾಗಣ್ಣ.—ಈ ಭವನದಲ್ಲಿ ಎಷ್ಟು ಜನ ಕೆಲಸದಲ್ಲಿದ್ದಾರೆ? ಮತ್ತು ಅಲ್ಲಿ ಅವರಿಗೆ ಖರ್ಚಾಗುವಂತಹ ಮೊಬಲಗು ಎಷ್ಟು? ಮತ್ತು ಶಾಸಕರು ಅಲ್ಲಿ ಹೋದರೆ ಅವರಿಗೆ ಎಷ್ಟು ರೇಟ್?

ಶ್ರೀ ಡಿ. ದೇವರಾಜ ಅರಸ್.—ಶಾಸಕರಿಗೆ ಸ್ವಲ್ಪ ರೇಟ್ ಹೆಚ್ಚಾಗಿತ್ತು. ಈಗ ಅದನ್ನು ಸ್ವಲ್ಪ ಕಡಿಮೆ ಮಾಡಬೇಕೆಂದಿದ್ದೇವೆ, ಮತ್ತು ಮಾಡುತ್ತೇವೆ.

ಶ್ರೀ ಕೆ.ಎಂ. ನಾಗಣ್ಣ.—ಅಲ್ಲಿ ಸಿಬ್ಬಂದಿಗೆ ಎಷ್ಟು ಹಣ ಖರ್ಚಾಗಿದೆ ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಅದು ಹೀಗೆ ಇದೆ.

Establishment charges during 1971	Rs.	87,150
do 71-72	Rs.	1,41,982
Board, Lodging and other receipts during 1971	Rs.	1,27,618—56
during 1971-72	Rs.	2,22,701—23

ವಂಧ್ಯದಲ್ಲಿ ದರ ಏರಿರುವುದರಿಂದ ಒಂದು ಲಕ್ಷದ ಚಿಲ್ಲರೆ ಖರ್ಚಿನಲ್ಲಿ ಕೇವಲ ೪೨ ಸಾವಿರ ಸಿಬ್ಬಂದಿಗೆ ಹೆಚ್ಚು ಖರ್ಚಾಗಿತ್ತು. ಅದೂ ಆಲ್ಲದೆ ಡೆಲ್ಲಿಯಲ್ಲಿ ಸಂಬಳ ಕಡಿಮೆಯಾದರೆ ಜೀವನ ಮಾಡುವುದು ಬಹಳ ಕಷ್ಟವಾಗಿರುವುದರಿಂದ ಸಂಬಳ ಸ್ವಲ್ಪ ಹೆಚ್ಚು ಮಾಡಬೇಕಾಯಿತು. ಇದರಿಂದ ಒಂದು ೪೨ ಸಾವಿರ ರೂಪಾಯಿ ಚಿಲ್ಲರೆ ಖರ್ಚು ಆ ಸೈಡಿನಲ್ಲಿ ಜಾಸ್ತಿಯಾಗಿದೆ. ಆದರೆ ಒಂದು ಲಕ್ಷದ ೫೧ ಸಾವಿರ ರೂಪಾಯಿ ವರಮಾನ ಬಂದಿದೆ.

ಶ್ರೀ ಆರ್. ಗುಂಡೂರಾವ್.—ಮೈಸೂರು ಭವನದಲ್ಲಿ ಪೂರ್ತಿಯಾಗಿ ತಮಿಳು ಮಾತನಾಡುವವರು ಮತ್ತು ಹಿಂದಿ ಮಾತನಾಡುವವರು ಇದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಭವನ ಇದ್ದರೂ ಅದು ಇರುವುದು ಡೆಲ್ಲಿಯಲ್ಲಿ.

ಶ್ರೀ ಕೋಣಂದೂರು ಲಿಂಗಪ್ಪ.—ತಮಿಳ್ನಾಡು ಭವನದಲ್ಲಿ ಇರುವವರು ಯಾರು ಸ್ವಾಮಿ? ಅಲ್ಲಿ ತಮಿಳ್ನಾಡಿನವರು ಇಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಅವರು ಏನು ಮಾಡುತ್ತಾರೆ. ಅದನ್ನೇ ನಾವೂ ಮಾಡುವುದಕ್ಕಾಗುತ್ತದೆಯೆ? ಅವರು ದೇಶವನ್ನೇ ದ್ರಾವಿಡ ಕಜಗಂ ಮಾಡಬೇಕೆಂದು ಹೇಳುತ್ತಾರೆ, ಹಾಗೆ ನಾವು ಮಾಡುವುದಕ್ಕಾಗುತ್ತದೆಯೇ? ಕನ್ನಡದವರನ್ನು ಇಲ್ಲಿಂದ ಕಳಿಸಿಕೊಟ್ಟರೂ ಅವರು ಅಲ್ಲಿ ನಿಲ್ಲುವುದಿಲ್ಲ. ಅದ ಕ್ಕೋಸ್ಕರ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಯಾರು ಬರುತ್ತಾರೆ ಅವರನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಒಬ್ಬ ಸ್ವೀಪರ್‌ನ್ನು ಸಹ ಇಲ್ಲಿಂದ ನಮಗೆ ಕಳಿಸುವುದಕ್ಕಾಗಲಿಲ್ಲ. ಆದ್ದರಿಂದ ಅಲ್ಲಿಂದಲೇ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ, ಅಲ್ಲೇ ಇದ್ದವರನ್ನು ತೆಗೆದುಕೊಂಡರೆ ಅವರಿಗೆ ಅಲ್ಲೇ ಮನೆ ಇರುತ್ತದೆ. ಆದರೆ ಆಲ್ಲಿಯವರು ಹೋದರೆ ಅವರಿಗೆ ಮನೆಗಳೂ ಸಿಗುವುದಿಲ್ಲ ಮತ್ತು ಕೊಡುವ ಸಂಬಳ ಸಹ ಸಾಲುವುದಿಲ್ಲ. ಅಲ್ಲಿ ನಮ್ಮವರಿಗೆ ಮನೆ ಸಿಗುವುದು ಕಷ್ಟವಾಗುತ್ತದೆ. ಮತ್ತು ಅಧಿಕಾರ ವರ್ಗದವರಿಗೆ ಎಲ್ಲರಿಗೂ ಮನೆ ಕಟ್ಟಿಸಿಕೊಡುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ.—ಇನ್ನು ಮುಂದೆ ಕನ್ನಡಿಗರನ್ನು ಅಲ್ಲಿಗೆ ಕಳುಹಿಸುವುದಕ್ಕೆ ಏರ್ಪಾಡುಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅವರನ್ನು ಎಷ್ಟರಮಟ್ಟಿಗೆ ಕಳುಹಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ ನಾನು ಅದರ ಬಗ್ಗೆ ಪ್ರಯತ್ನಮಾಡಿ ಕಳುಹಿಸಿಕೊಡುತ್ತೇನೆ. ಸಾಧ್ಯವಿಲ್ಲದೆ ಹೋದರೆ ಅಲ್ಲಿಯೇ ತೆಗೆದುಕೊಳ್ಳುತ್ತಿದ್ದೇವೆ ಅವರನ್ನು ಅನೇಕ ಸಂದರ್ಭಗಳಲ್ಲಿ ಹೆಚ್ಚು ಜನ ಹೋದಾಗ ನೋಡುವುದಕ್ಕೆ ಅವಕಾಶ ಇರುವುದಿಲ್ಲ.

EXPENDITURE TO BE INCURRED TOWARDS EDUCATION IN THE STATE.

407. SRI K. SRIRAMULU (Gandhinagar).—

Will the Minister for Education be pleased to state.—

(*a*) the total amount of expenditure to be incurred by the Government towards education in the State ;

(*b*) out of this, the amount to be spent for Government and private schools ;

(*c*) the amount spent or granted for development of different languages under education Head ?

SRI A. R. BADARINARAYANA.—(Minister for Education)

An amount of Rs. 60.90 crores is earmarked for the year 1972-73 towards education.

(*b*)	*Non-plan.*		*Rs. in crores.*
1.	Government Primary Schools	...	24.07
2.	Private Primary School	...	2.61
3.	Local boards Primary Schools	...	0.88
4.	Government Secondary Schools	...	2.10
5.	Private Secondary Schools	...	7.17
6.	Local Boards Primary Schools	...	2.34
	Total	...	39.17
	Plan.		
1.	Primary Education	...	1.49
2.	Secondary Education	...	0.35
	Total	...	1.84

(*c*) The details of amount earmarked in respect of different languagges is not available, as the Budget is not framed on those lines.

ಶ್ರೀ ಕೆ. ಶ್ರೀರಾಮುಲು.—ತಮ್ಮ ಇಲಾಖೆಯಲ್ಲಿ ಯಾವ್ಯಾವ ಭಾಷೆಗೆ ಎಷ್ಟೆಷ್ಟು ವಿದ್ಯಾರ್ಥಿಗಳು ಇದ್ದಾರೆಂಬುದು ಗೊತ್ತಾಗುತ್ತದೆಯೇ ?